INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-5, Issue -4, July-August, 2023,
PageNo,23-28
Peer -Reviewed, Refereed Journal

# ವೃಷಭಪುರಿ ಬೃಹನ್ಮಠ ನಂದಿಗುಡಿ–ಒಂದು ಅವಲೋಕನ

**ಬಸವನಗೌಡ.ಕೆ.**[1]

ನಂದಿಗುಡಿ ಬೃಹನ್ಮಠವು ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿದ್ದು, ಇದು ಹರಿಹರ ತಾಲ್ಲೂಕಿನ ನಂದಿಗುಡಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ೨೮ ಕಿ.ಮೀ. ದೂರದಲ್ಲಿದೆ. ನೊಳಂಬ ರಾಜರ ಲಾಂಛನವಾಗಿದ್ದ ನಂದಿಯನ್ನೇ ಹೋಲುವ ಬೃಹತ್ ಆಕೃತಿಯ ನಂದಿಯು ಇಲ್ಲಿ ಸ್ಥಾಪನೆಯಾಗಿರುವುದರಿಂದ ಈ ಗ್ರಾಮಕ್ಕೆ 'ನಂದಿಗುಡಿ' ಎಂದು ಹೆಸರು ಬಂದಿದೆ. ಮಲ್ಲಿಕಾರ್ಜುನ ಲಿಂಗದ ಎದುರು ಎಡಗಾಲನ್ನು ಮುಂದಿಟ್ಟುಕೊಂಡು ಮಲಗಿರುವ ನಂದಿಯ ಎಡಬಲ ಬದಿಯಲ್ಲಿ ಭೈರವ ಮೂರ್ತಿಗಳು ಮತ್ತು ನಂದಿಯ ಹಿಂಬದಿಯ ಗರ್ಭಗುಡಿಯಲ್ಲಿ ಸೂರ್ಯದೇವನ ಮೂರ್ತಿ ಹಾಗೂ ದೆವಸ್ಥಾನದ ಒಳಗಡೆ ಅನೇಕ ಆಕರ್ಷಕ ಶಿಲೆಯ ಮೂರ್ತಿಗಳು ಇವೆ. ದೇವಸ್ಥಾನವನ್ನು ನೂತನವಾಗಿ ನಿರ್ಮಿಸಲಾಗಿದೆ. ಇದರ ಎದುರಗಡೆಗೆ ಶ್ರೀ ಬೃಹನ್ಮಠ ಸ್ಥಾಪಿತವಾಗಿದೆ.

**ಬೃಹನ್ಮಠ:** ನಂದಿಗುಡಿಯ ತುಂಗಭದ್ರ ನದಿಯ ಎಡ ದಡದ ಮೇಲೆ ಸ್ಥಾಪಿತವಾಗಿರುವ ಬೃಹನ್ಮಠವು ೮೦೦ ವರ್ಷಗಳಿಗಿಂತಲೂ ಹಿಂದೆ ಸ್ಥಾಪನೆಯಾಗಿರಬಹುದೆಂದು ಊಹೆ ಮಾಡಲಾಗಿದೆ. ಶ್ರೀಶೈಲ ಶಾಖಾನುವರ್ತಿಯಾದ ಈ ಸಂಸ್ಥಾನ ಮಠವು ನೊಳಂಬ ರಾಜರ ಕಾಲದಲ್ಲಿ ಸ್ಥಾಪನೆಯಾಗಿತ್ತೆಂದೂ ಸಹ ಹೇಳಲಾಗುತ್ತಿದೆ. ೨೫ಕ್ಕೂ ಹೆಚ್ಚು ಮಠಾಧೀಶರು ಬೃಹನ್ಮಠದ ಅಧಿಕಾರಕ್ಕೆ ಬಂದು ಹೋಗಿರಬಹುದೆಂದು ಅಂದಾಜಿಸಲಾಗಿದೆ.

ಶ್ರೀಗಳವರ ಮಾಹಿತಿ ಈ ಕೆಳಗಿನಂತಿದೆ. ಕೆಲವು ಮಠಾಧೀಶರ ಬಗ್ಗೆ ಮಾಹಿತಿಯು ಅಸ್ಪಷ್ಟವಾಗಿದೆ.

೧. ಷ.ಬ್ರ.ಶ್ರೀ ಕೆಂಚವೀರ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ ಕರಿಬಸವೇಶ್ವರ ಶಿವಯೋಗಿಸ್ವಾಮಿಗಳು (ಆರನೆಯ ಪಟ್ಟಾಧ್ಯಕ್ಷರು)

೩. ಷ.ಬ್ರ.ಶ್ರೀ ಕರಿಬಸವೇಶ್ವರ ಶಿವಾಚಾರ್ಯಸ್ವಾಮಿಗಳು

---

[1].**ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ,ಕನ್ನಡ ವಿಶ್ವವಿದ್ಯಾಲಯ, ಹಂಪಿ,ವಿದ್ಯಾರಣ್ಯ**

೪. ಷ.ಬ್ರ.ಶ್ರೀ ಶಿವಾಲಯ ಶಿವಾಚಾರ್ಯಸ್ವಾಮಿಗಳು

೫. ಷ.ಬ್ರ.ಶ್ರೀ ಶಿವನಂಜುಂಡೇಶ್ವರ ಶಿವಾಚಾರ್ಯಸ್ವಾಮಿಗಳು

೬. ಷ.ಬ್ರ.ಶ್ರೀ ಚಂದ್ರಶೇಖರ ಭಾರತಿ ಶಿವಾಚಾರ್ಯಸ್ವಾಮಿಗಳು

೭. ಷ.ಬ್ರ.ಶ್ರೀ ಮೃತ್ಯುಂಜಯ ಶಿವಾಚಾರ್ಯಸ್ವಾಮಿಗಳು

೮. ಷ.ಬ್ರ.ಶ್ರೀ ಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು

೯. ಷ.ಬ್ರ.ಶ್ರೀ ನಂದೀಶ್ವರ ಶಿವಾಚಾರ್ಯಸ್ವಾಮಿಗಳು

೧೦. ಷ.ಬ್ರ.ಶ್ರೀ ಶ್ರೀ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯಸ್ವಾಮಿಗಳು (ಪ್ರಸ್ತುತ ಮಠಾಧೀಶರು)

ಪಟ್ಟಾಧಿಕಾರಿಯಾಗಿ ಅಧಿಕಾರಕ್ಕೆ ಬಂದ ಶ್ರೀ ಕರಿಬಸವೇಶ್ವರ ಶಿವಯೋಗಿ ಸ್ವಾಮಿಗಳು ಮಹಾಪ್ರವಚನಕಾರರು. ಇವರು ಧರ್ಮಪ್ರಸಾರಕ್ಕೆಂದು ದೀರ್ಘ ಕಾಲ ಬೇರೆಡೆಗೆ ಹೋಗಿ ಬರುತ್ತಿದ್ದರು. ಒಮ್ಮೆ ಅವರು ವೃದ್ಧಾಪ್ಯದಲ್ಲಿ ಧರ್ಮಪ್ರಸಾರಕ್ಕೆ ಪಶ್ಚಿಮಾಭಿಮುಖವಾಗಿ ಹೋಗಿದ್ದವರು ಮಠಕ್ಕೆ ಹಿಂದಿರುಗಿ ಬರುವ ವೇಳೆಗೆ ತುಂಗಾಭದ್ರಾ ನದಿಯು ತುಂಬಿ ಹರಿಯತೊಡಗಿತ್ತು. ಆಗ ಒಂದು ಕಂಬಳಿಯನ್ನು ಹಾಸಿಕೊಂಡು ಈ ದಡದಿಂದ ಆಕಡೆ ದಡವನ್ನು ಸೇರಿ ಅಲ್ಲಿಯೇ ಅಂದರೆ ಉಕ್ಕಡಗಾತ್ರಿಯಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಶಿವಾಲಯ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಂಡು ಮಠವನ್ನು ಅಭಿವೃದ್ಧಿಪಡಿಸಿರುತ್ತಾರೆ. ಇವರ ನಂತರ ಇಬ್ಬರು ಸ್ವಾಮಿಗಳು ಅಧಿಕಾರವನ್ನು ನಡೆಸಿದ್ದಾರೆಂದು ನಂತರ ಶ್ರೀ ಶಿವನಂಜುಂಡೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಧರ್ಮದುರುಂಧರರಾಗಿ, ಧರ್ಮಪ್ರಸಾರ ಮಾಡಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ಇವರ ನಂತರ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳು, ಮೃತ್ಯುಂಜಯ ಸ್ವಾಮಿಗಳು ಮತ್ತು ಬಸವರಾಜ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದು ಆಧ್ಯಾತ್ಮದ ಬಗ್ಗೆ ಹೆಚ್ಚು ಒಲವು ತೋರಿಸಿ ಮಠವನ್ನು ಧಾರ್ಮಿಕವಾಗಿ ಬೆಳಗಿಸಿದರು. ಅಲ್ಲದೆ ಇವರ ಆಡಳಿತ ಕಾಲದಲ್ಲಿ ಮಠಕ್ಕೆ ಸುಸಜ್ಜಿತ ಕಟ್ಟಡವು ನಿರ್ಮಾಣಗೊಂಡು ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದರು.

**ನಂದೀಶ್ವರರು:** ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು ೧೯೭೬ರ ಡಿಸೆಂಬರ್ ಇಪ್ಪತ್ತಾರರಂದು ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ಇಬ್ಬದಾಣಿ ಗ್ರಾಮದಲ್ಲಿ ಶ್ರೀ ನಂಜುಂಡಯ್ಯ ಮತ್ತು ಶ್ರೀಮತಿ ಅಪರ್ಣಮ್ಮನವರ ಪುತ್ರರಾಗಿ ಜನಿಸಿ, ಮೈಸೂರಿನಲ್ಲಿ ಪದವಿಯನ್ನು ಪಡೆದು, ಹಾಸನ ತಾಲ್ಲೂಕಿನ ಯಲಗುಂದ ಮಠದ ಮಠಾಧೀಶ್ವರರಾಗಿ ಅಧಿಕಾರ ವಹಿಸಿಕೊಂಡರು. ನಂದಿಗುಡಿಯ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳ ಆಶಯದಂತೆ ವೃಷಭಪುರಿ ಸಂಸ್ಥಾನಾಧೀಶರಾಗಿ ೧೯೯೫ರ ನವೆಂಬರ್ ಇಪ್ಪತ್ತೆಂಟರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

**ನಂದಿಯುವ ವೇದಿಕೆ:** ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು ಮಠಕ್ಕೆ ಬರುವ ವೇಳೆಗೆ ಮಠ ಮತ್ತು ಸಮಾಜದ ಒಂದೊಂದೇ ಕೊಂಡಿಗಳು ಕಳಚಿಕೊಳ್ಳುತ್ತಾ ಬಂದಿದ್ದವು. ದೂರವಾಗುತ್ತಿದ್ದ ಸಂಬಂಧಗಳನ್ನು ಹತ್ತಿರ ಮಾಡಿಕೊಂಡರು. ಸಂಘಟನೆ ದೃಷ್ಟಿಯಿಂದ ನುಚ್ಚುನೂರಾಗಿದ್ದ ನೊಳಂಬ ಸಮಾಜವನ್ನು ಪುನರ್ ಸಂಘಟನೆ ಮಾಡಿದರು. ಶ್ರೀ ನಂದಿ ಯುವ ವೇದಿಕೆಯನ್ನು ಸಂಘಟನೆ ಮಾಡಿ ಸಮಾಜದ ಬಾಂಧವರನ್ನು ತಮ್ಮ ಭಾವು ಬಂಧನದಲ್ಲಿ ಬಂದಿಸಿದರು. ಯುವ ಸೇನೆಯು ಎಲ್ಲಾ ಕಡೆ ತುಂಬ ಉತಸಾಹದಿಂದ ಕಾರ್ಯನಿರ್ವಹಿಸುವಂತೆ ಹುರಿದುಂಬಿಸಿದರು. ಅಲ್ಲದೆ ಆರ್ಥಿಕವಾಗಿ ಸದೃಢತೆ ಸಾಧಿಸದಿದ್ದರೆ ಮಠ ಮತ್ತು ಸಮಾಜದ ಅಂತರ ಇನ್ನೂ ದೂರವಾಗುತ್ತದೆ ಎಂದು ಭಾವಿಸಿದ ಗುರುಗಳು ಪಾಳು ಬಿದ್ದಿದ್ದ ಮಠದ ೫೦ ಎಕರೆ ಜಮೀನನ್ನು ಅಭಿವೃದ್ಧಿಪಡಿಸಲು ಯತ್ನಿಸಿದರು. ಇಲ್ಲಿಯೂ ಸರಿಯಾದ ಸಹಕಾರ ಸಿಕ್ಕದಿದ್ದಾಗ, ಈ ನೋವೇ ಗೆಲುವಿನ ಸೋಪಾನ ಎಂದು ಅರಿತು ತಾವೇ ಗದ್ದೆಗೆ ಇಳಿದು ಕಾಯಕ ಮಾಡತೊಡಗಿದರು. ಇದರ ಫಲವೇ ನೂರಾರು ಚೀಲ ಭತ್ತ ಬೆಳೆಯಲು ಸಾಧ್ಯವಾಯಿತು. ಈ ಭಾಗದ ವೀರಶೈವರನ್ನೆಲ್ಲ ಒಂದು ಮಾಡಿ ಒಬ್ಬರಿಗೊಬ್ಬರ ಮುಖ ನೋಡಿಕೊಳ್ಳದಂತಿದ್ದ ಭಕ್ತರು ಒಬ್ಬರಿಗೊಬ್ಬರು ಪ್ರೀತಿಸುವಂತೆ ಮಾಡಿದರು.

**ಶ್ರೀಗಳ ಸಮಾಜಮುಖಿ ಕಾರ್ಯ:** ಮಠ ಮತ್ತು ಸಮಾಜದಲ್ಲಿದ್ದ ತೊಡಕುಗಳನ್ನು ಬಗೆಹರಿಸತೊಡಗಿದ ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು ಭಕ್ತರ ಉದ್ಧಾರವೇ ಮಠದ ಉದ್ಧಾರ ಎಂದು ಅರಿತು ದಾವಣಗೆರೆ, ಹೊಸದುರ್ಗ, ಹೊಳಲ್ಕೆರೆ, ಚನ್ನಗಿರಿ, ಭದ್ರಾವತಿ, ಶಿವಮೊಗ್ಗ, ಹೊನ್ನಾಳಿ, ಶಿಕಾರಿಪುರ, ಸೊರಬ, ಹಾನಗಲ್, ಬ್ಯಾಡಗಿ, ಹಿರೇಕೆರೂರ್, ರಾಣಿಬೆನ್ನೂರು, ಹಾಸನ, ಅರಸೀಕೆರೆ ಮುಂತಾದ ತಾಲ್ಲೂಕುಗಳ ತಮ್ಮ ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡುವ ಮೂಲಕ ಜನರ ಜಾಗೃತಗೊಳಿಸಿದರು. ನೂರಾರು ಚೀಲ ಭತ್ತ, ರಾಗಿ, ಜೋಳದಂತಹ ಧಾನ್ಯಗಳ ಸಂಗ್ರಹಣೆ ಮಾಡಿ ದಾಸೋಹ ನೆರವೇರಿಸಿದರು.

ಅಭಿವೃದ್ಧಿ ಕಾರ್ಯಗಳು: ಮಠದ ಹಳೆಯ ಆವರಣದಲ್ಲಿ ೧೫ ಲಕ್ಷ ರೂಪಾಯಿ ವೆಚ್ಚದಲ್ಲಿ ವಸತಿ ಗೃಹವನ್ನು ನಿರ್ಮಿಸಿದ್ದಾರೆ. ೨೨ ಲಕ್ಷ ರೂಪಾಯಿ ಯೋಜನೆಯ ಕಲ್ಯಾಣಮಂಟಪವನ್ನು ಕಟ್ಟಿಸಲು ಯೋಜನೆ ತಯಾರಿಸಿಕೊಂಡು, ಕಲ್ಯಾಣಮಂಟಪ ಸ್ಥಾಪನೆ ಮಾಡಿ ಬಡಜನರ ಕಲ್ಯಾಣ ಕಾರ್ಯಗಳಿಗೆ ಬಳಸಿದರು. ಎರಡು ಎಕರೆ ಜಾಗದಲ್ಲಿ ಮಠಕ್ಕೆ ನೂತನ ಕಟ್ಟಡ ಕಟ್ಟಿಸಲು ಯೋಜನೆ ರೂಪುಗೊಂಡಿದೆ. ಮಠದ ಹಿಂಬದಿಯಲ್ಲಿ ಇರುವ ನಂದಿ ದೇವಸ್ಥಾನವನ್ನು ಬೃಹತ್ ಆಗಿ ನಿರ್ಮಿಸಲಾಗಿದೆ. ಶಿವಾನುಭಾವ ಗೋಷ್ಠಿ, ವಚನಪಾಠ, ಸಂಸ್ಕೃತ ಕಲಿಕೆಗೆ ಅವಕಾಶ ಮಾಡಿಕೊಟ್ಟರು. ತದನಂತರದಲ್ಲಿ ಜಗದ್ಗುರು ಲಿಂಗೈಕ್ಯ ಶ್ರೀ ಶ್ರೀ ಶ್ರೀ ಶಿವಾಲಯ ದೇಶೀಕೇಂದ್ರ ಮಹಾಸ್ವಾಮಿಗಳನ್ನು ಮೊದಲಗ್ಗೊಂಡು ಈಗ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ೨೦ನೇ ಜಗದ್ಗುರುಗಳಾಗಿ ಪೀಠವನ್ನು ಆಲಂಕರಿಸಿ ನಾಡಿನ ಜನತೆಯ ಸೇವೆಯನ್ನು ಮಾಡುತ್ತಿದ್ದಾರೆ.

ಶತ ಶತಮಾನಗಳಿಂದ ಅವ್ಯಾಹತವಾಗಿ ನಡೆದುಬಂದಿರುವ ಹಿಂದೂ ಧರ್ಮ ಅನೇಕ ಪುಣ್ಯ ಪುರುಷರು ಗಣ್ಯ ಶ್ರೇಷ್ಠರ ಶಿವಾನುಭವಿಗಳ ಮನ್ನಣೆಯ ಹಾಗೂ ಮಹಾಶರಣ ಕೃಪಾಶೀರ್ವಾದದಿಂದ ಅತ್ಯಂತ ಮಹತ್ವದ ಧರ್ಮವಾಗಿ ಬೆಳೆಯುತ್ತಲಿದೆ. ಪುಣ್ಯ ಪುರುಷರು ನಗದ ನೆಲ ಪಾವನವಾಗಿದೆ. ಆಡಿದ ಮಾತುಗಳು ಮಂತ್ರವಾಗಿವೆ. ಮಾಡಿದ ಕ್ರಿಯೆಗಳೆಲ್ಲಾ ಪವಾಡಗಳಾಗಿವೆ. ಇಂತಹ ಶಿವಯೋಗ ಸಿದ್ದಿಯನ್ನು ಪಡೆದವರು ನಂದಿಗುಡಿ ಬೃಹನ್ಮಠದ ಗುರು ಪರಂಪರೆಯ ಪಟ್ಟಾಧ್ಯಕ್ಷರಾದ ಶ್ರೀಮದ್ ವೃಷಭಪುರಿ ಸೂರ್ಯ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶ್ರೀ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು, ಮಠದ ಉನ್ನತಿಗಾಗಿ ಶ್ರೀಗಳವರು ಹಗಲಿರಳು ಶ್ರಮಿಸುತ್ತಿದ್ದಾರೆ. ಮಠವನ್ನು ಸಮಾಜಮುಖಿಯಾಗಿ ಮಾಡುವ ಪ್ರಯತ್ನವನ್ನು ಮುಂದುವರೆಸಿದ್ದಾರೆ.

### ಶ್ರೀ ನಂದೀಶ್ವರ ವಿದ್ಯಾಸಂಸ್ಥೆಯ ಸ್ಥಾಪನೆ

೪೮ ವರ್ಷಗಳ ಹಿಂದೆ ನಂದಿಗುಡಿಯಲ್ಲಿ ಯಾವುದೇ ವಿದ್ಯಾಸಂಸ್ಥೆಗಳಲ್ಲಿ ಅದರಿಂದ ಶಿಕ್ಷಣ ಪಡೆಯಲು ದೂರದ ಊರುಗಳಿಗೆ ಹೋಗಬೇಕಾಗಿತ್ತು. ಇದನ್ನು ಮನಗಂಡ ಶ್ರೀ ಡಿ.ಹೆಚ್. ನಿಂಗನಗೌಡರು ಈ ಭಾಗದಲ್ಲಿ ಒಂದು ಪ್ರೌಢಶಾಲೆಯನ್ನು ತೆರೆಯಲು ತೀರ್ಮಾನಿಸಿದರು. ಲಿಂಗೈಕ್ಯ ಶ್ರೀ ಶ್ರೀ ಶ್ರೀ ಮೃತ್ಯುಂಜಯ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಗೌರವ್ಯಪರರಾಗಿ ಮಾಡಿ ಶ್ರೀಗಳ ಆಶೀರ್ವಾದ ಪಡೆದು ೧೯೭೪–೭೫ ರಲ್ಲಿ ಜೂನ್‌ನಲ್ಲಿ ಶ್ರೀ ನಂದೀಶ್ವರ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿ ಅಂದು ಪ್ರೌಢಶಾಲೆಯೊಂದನ್ನು ಪ್ರಾರಂಭಿಸಿದರು. ನಂತರ ಲಿಂಗೈಕ್ಯ ಶ್ರೀಗಳು ೧೯೯೦–೯೧ ನೇ ಸಾಲಿನಲ್ಲಿ ಶ್ರೀ ನಂದೀಶ್ವರ ಹಿರಿಯ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿದ್ದರು. ನಿರಂತರವಾಗಿ ೨೯ನೇ ಗುರುಗಳಾದ ಶ್ರೀ ಶ್ರೀ ೧೦೮ ಜಗದ್ಗುರು ನಂದೀಶ್ವರ ಶೀವಾಚಾರ್ಯ ಮಹಾಸ್ವಾಮಿಗಳು ಶ್ರೀ ನಂದೀಶ್ವರ ಉನ್ವೆಂಟ್ ಸ್ಕೂಲ್, ಶ್ರೀ ನಂದೀಶ್ವರ ಕೈಗಾರಿಕಾ ತರಬೇತಿ ಕೇಂದ್ರ (ಐ.ಟಿ.ಐ. ಕಾಲೇಜು), ಶ್ರೀ ನಂದೀಶ್ವರ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ಯನ್ನು ೨೦೦೪–೨೦೦೫ನೇ ಸಾಲಿನಲ್ಲಿ ಗ್ರಾಮೀಣ ಮಟ್ಟದಲ್ಲಿ ಬಡ ಮತ್ತು ಹಿಂದುಳಿದ ವರ್ಗದವರಿಗೆ ಉನ್ನತ ಶಿಕ್ಷಣ ನೀಡುವ ದೃಷ್ಟಿಯಿಂದ ಅನೇಕ ಶಾಲೆ–ಕಾಲೇಜುಗಳನ್ನು ಸ್ಥಾಪಿಸಿದರು.

### ಶ್ರೀ ನಂದೀಶ್ವರ ವಿದ್ಯಾ ಸಂಸ್ಥೆಯ ಮಹತ್ವ

ಭಾರತದಂತಹ ಬೃಹತ್ ಪ್ರಜಾ ಪ್ರಭುತ್ವದ ರಾಷ್ಟ್ರದಲ್ಲಿ ಸರ್ಕಾರಿ ಸಂಸ್ಥೆಗಳ ಕಾಯಕಕ್ಕೂ ಮತ್ತು ಖಾಸಗಿ ಸಂಸ್ಥೆಗಳ ಕಾಯಕಕ್ಕೂ ಕೂಲಂಕುಷವಾಗಿ ನೋಡಿದಾಗ ಖಾಸಗಿ ಸಂಸ್ಥೆಗಳು ತಮ್ಮ ಪ್ರಮಾಣದ ದೃಷ್ಟಿಯಿಂದಲೂ ಗುಣಾಧಿಕ್ಯದಿಂದಲೂ ಮಾತ್ರವಲ್ಲದೇ ಅತ್ಯುತ್ತಮ ಶಿಕ್ಷಣ ಮಟ್ಟವನ್ನು ನಿರ್ವಹಿಸುವಲ್ಲಿ ಸಹ ಖಾಸಗಿ ಶಾಲೆಗಳು ಉತ್ತಮವಾದ ಉನ್ನತ ಸ್ಥಾನ ಪಡೆದಿವೆ.

ಸಮಾಜವು ಬೆಳೆಯುತ್ತಾ ಹೋದಂತೆ ಶಿಕ್ಷಣ ಪಡೆಯಬೇಕೆಂಬ ಹಂಬಲ ಜನರಲ್ಲಿ ಜಾಗೃತಿ ಉಂಟುಮಾಡಿತು. ಈ ಹಂಬಲ ಜನರಲ್ಲಿ ಜಾಗೃತಿ ಉಂಟುಮಾಡಿತು. ಈ ಹಂಬಲವನ್ನು ಕೇವಲ ಸರ್ಕಾರಿ

ಸಂಸ್ಥೆಗಳು ಈಡೇರಿಸಲು ಸಾಧ್ಯವಾಗದ ಕಾರಣ ಖಾಸಗಿ ಸಂಸ್ಥೆಗಳು ತುಂಬಾ ಶ್ರಮ ವಹಿಸಿ ದುಡಿಯಲಾರಂಭಿಸದವು. "ಕಲ್ಲರಳಿ ಹೂವಾಯ್ತು" ಎಂಬ ಹೇಳಿಕೆಯಂತೆ ಕಲ್ಲಿನಂತಿರುವಅವರ ಅಜ್ಞಾನವನ್ನು ಹೋಗಲಾಡಿಸಿ ಹೂವಿನಂತಿರುವ ಸುಜ್ಞಾನವನ್ನು ಅರಳಿಸಿ ಪ್ರಗತಿಯತ್ತ ಸಾಗುವಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಯತ್ನಿಸುತ್ತಿವೆ. ಇವುಗಳ ಪ್ರಾಮುಖ್ಯತೆಯನ್ನು ಒಂದೊಂದಾಗಿ ಅರಿಯೋಣ.

ಸಮಾಜದಲ್ಲಿ ಜನರಿಗೆ ಉನ್ನತ ಮಟ್ಟದ ಶಿಕ್ಷಣ ಒದಗಿಸಲು ಸಹಾಯ ಮಾಡುವುದು.

* ಶಿಕ್ಷಣದಲ್ಲಿ ಉನ್ನತ ಪ್ರಗತಿ ಸಾಧಿಸಲು ಖಾಸಗಿ ಸಂಸ್ಥೆಗಳ ಮಹತ್ವ ಹಿರಿದಾಗಿದೆ.
* ಶಿಕ್ಷಣವು ಪ್ರತಿಯೊಬ್ಬ ಜನ ಸಾಮಾನ್ಯನಿಗೂ ತಲುಪಿಸುವುದಕ್ಕೆ ಶ್ರಮಿಸುವುದು.
* ಶಿಕ್ಷಣದಲ್ಲಿ ಉತ್ತಮ ಶಿಸ್ತು ಕಾಮಿಡಿಕೊಳ್ಳುವುದರಲ್ಲಿ ಶ್ರಮಿಸುವುದು, .
* ಜನರಲ್ಲಿನ ಅಜ್ಞಾನವನ್ನು ಅಳಿಸುವಲ್ಲಿ ಸತತವಾಗಿ ಪ್ರಯತ್ನಿಸುವುದು.
* ಮಗುವಿನ ಬೌದ್ಧಿಕ ಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುವುದು.
* ಶಿಕ್ಷಣದಲ್ಲಿ ಶ್ರೇಷ್ಠತೆ ಕಾಪಾಡಿಕೊಳ್ಳುವಲ್ಲಿ ಸಹಾಯ ಮಾಡುವುದು.
* ಮಗುವಿನ ದೈಹಿಕ ಭಾವನಾತ್ಮಕ ಮಾನಸಿಕ ಮತ್ತು ಆಧ್ಯಾತ್ಮಿಕ ಅವಶ್ಯಕತೆಗೆ ತೃಪ್ತಿ ಹೊಂದಲು ಅವಕಾಶ ಮಾಡಿಕೊಡುವುದು,
* ಪರರ ಕಲ್ಯಾಣವನ್ನು ಅನವರತವಾಗಿ ಚಿಂತಿಸುವಂತಹ ಸರ್ವತೋಮುಖ ವ್ಯಕ್ತಿತ್ವದ ವಿಕಾಸವನ್ನು ಉಂಟು ಮಾಡುವುದು,
* ಮಗುವಿನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರ
* ಶ್ರೇಷ್ಠವಾಗಿ ಜೀವಿಸಲು ಜೀವನ ಕಲೆಯನ್ನು ಕಲಿಸಿಕೊಡುವುದು,
* ಜನತೆಯ ಜೀವನ ಕಲಿಯನ್ನು ಬದಲಾಯಿಸಿ ಆ ಮೂಲಕ ಸಾಮಾಜಿಕ ವ್ಯವಸ್ಥೆಯನ್ನು ಉತ್ತಮಗೊಳಿಸುವಂತೆ ಮಾಡುವುದು.
* ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಯವರು ಪದೇ ಪದೇ ಶಾಲಾ ಕಾಲೇಜುಗಳ ಕಾರ್ಯವೈಖರಿಯನ್ನು ಮೌಲ್ಯಮಾಪನ ಮಾಡುವುದರಿಂದ ಶಿಕ್ಷಣದ ವ್ಯವಸ್ಥೆ ಉತ್ತಮವಾಗಿರುತ್ತದೆ.
* ಗ್ರಾಮೀಣ ಮಕ್ಕಳಿಗೆ ಶಿಕ್ಷಣ ನೀಡುವುದು.
* ಶೈಕ್ಷಣಿಕ ಸಮಾನಾವಕಾಶಗಳು
* ಸ್ತ್ರೀ ಶಿಕ್ಷಣಕ್ಕೆ ಆದ್ಯತೆ

* ಗ್ರಾಮೀಣ ಜನರಲ್ಲಿ ವೈಚಾರಿಕತೆ ನಿರ್ಮಾಣ
* ಪ್ರತಿಭಾವಂತರನ್ನು ಪ್ರೋತ್ಸಾಹಿಸುವುದು.
* ಸರ್ವರಿಗೂ ಶಿಕ್ಷಣ
* ವಿಚಾರವಂತ ವ್ಯಕ್ತಿ ನಿರ್ಮಾಣ
* ಶೈಕ್ಷಣಿಕ ಸಮಸ್ಯೆಗಳ ನಿವಾರಣೆಗೆ ಅಗತ್ಯ ಕ್ರಮಗಳು
* ಧಾರ್ಮಿಕ ಹಾಗೂ ಸಾಮಾಜಿಕ ವ್ಯಕ್ತಿಗಳನ್ನು ಗೌರವಿಸಿ ಆ ಮೂಲಕ ಸಾಮಾಜಿಕ ಪ್ರಗತಿ ಕಾರ್ಯ ಉತ್ತೇಜಿಸುವುದು.
* ಗ್ರಾಮೀಣ ಬಡ ಮಕ್ಕಳಿಗೆ ಉಚಿತ ಪ್ರಾಸದ ಮತ್ತು ವಸತಿ ವ್ಯವಸ್ಥೆ.

ಮೇಲ್ಕಂಡ ಸಂಗ್ರಹಿಸಿದ ಧ್ಯೆಯೋದ್ದೇಶಗಳನ್ನು ಗಮನಿಸಿದಾಗ ಶ್ರೀ ನಂದೀಶ್ವರ ವಿದ್ಯಾಸಂಸ್ಥೆಯು ಮೂಲತಃ ಗ್ರಾಮೀ ಮಕ್ಕಳ ಹಾಗೂ ಬಡ ಹಿಂದುಳಿದ ಮಕ್ಕಳ ತಿಳಿದು ಬರುತ್ತದೆ. ಗ್ರಾಮೀಣ ಜನರಲ್ಲಿವೈಚಾರಿಕತೆಯನ್ನು ಬೆಳೆಸುವುದು ಇದರ ಮುಖ್ಯ ಉದ್ದೇಶ ಮತ್ತು ಗ್ರಾಮೀಣ ಭಾಗದಲ್ಲಿ ಶಿಕ್ಷಣ ವಂಚಿತರಿಗೆ ಶಿಕ್ಷಣ ಒದಗಿಸುವುದಾಗಿದೆ. ಗ್ರಾಮೀಣ ಭಾಗದ ದೀನ ದಲಿತ ಮಕ್ಕಳಿಗೆ ಶೈಕ್ಷಣಿಕ ಸಮಾನಾವಕಾಶಗಳನ್ನು ನೀಡುತ್ತಿರುವುದು ಮಹತ್ವದ ಸಂಗತಿ, ಹಾಗೆಯೇ ಪ್ರಚಲಿತ ಸಮಸ್ಯೆಗಳಿಗೆ ಪರಿಹಾರ ನೀಡುವುದು ಮತ್ತು ಸಾಮಾಜಿಕ ಪ್ರಗತಿ ಕಾರ್ಯದ ಉದ್ದೇಶವನ್ನು ಹೊಂದಿರುವುದು ತಿಳಿದುಬರುತ್ತದೆ. ಈ ಭಾಗದ ಜನರ ಆಶಾಕಿರಣವಾಗಿದೆ. ಹಾಗೆಯೇ ನಿರಂತರ ದಾಸೋಹದಿಂದ ಪ್ರಸಿದ್ಧಿ ಪಡೆದು ಜನರ ದಾನ ದಾಸೋಹದ ಜೊತೆಗೆ ಅನ್ನ ದಾಸೋಹವನ್ನು ನೀಡುವ ಮಠವಾಗಿದೆ.

## ಪರಾಮರ್ಶನ ಗ್ರಂಥಗಳು

೧. ಕುಮಾರ ಮಾದೇನಹಳ್ಳಿ, ಶ್ರೀ ನಂದೀಶ್ವರ ವಿದ್ಯಾಸಂಸ್ಥೆಯ ಶೈಕ್ಷಣಿಕ ಕೊಡುಗೆಗಳ ವಿಮರ್ಶಾತ್ಮಕ ಅಧ್ಯಯನ, ೨೦೧೨, ಎಂ.ಫಿಲ್. ಪ್ರೌಢ ಪ್ರಬಂಧ, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ

೨. ಧರ್ಮದರ್ಶಿನಿ, ಸ್ಮರಣ ಸಂಚಿಕೆ, ೨೦೦೪, ಬೃಹನ್ಮಠ, ನಂದಿಗುಡಿ

೩. ನಂದಿ ಪುಷ್ಪ ಸಿದ್ಧ ಸ್ಮರಣ ಸಂಚಿಕೆ, ೨೦೦೬, ಬೃಹನ್ಮಠ, ನಂದಿಗುಡಿ

೪. ಚಂದ್ರಶೇಖರ ನಾರಾಯಣಪುರ, ಕರ್ನಾಟಕದ ವೀರಶೈವ ಮಠಗಳು